ಕ್ರಮ ಸಂಖ್ಯೆ: 16

ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಹದಿನಾಲ್ಕನೇ ಅಧಿವೇಶನ

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-34)**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (9ಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(9ಎ) "ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ, ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಯನ್ನು ನಡೆಸಲು ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಅನುಕ್ರಮವಾಗಿ ಯಾವ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೋ, ಆ ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ."

**3. 13ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 13ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

**4. 48ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 48ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ಗ್ರಾಮಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನು,–

(i) ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು, ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣೀಕರಿಸಿರುವುದರ ರುಜುವಾತಿನ ಆಧಾರದ ಮೇಲೆ; ಅಥವಾ

(ii) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ;

– ತನ್ನ ಪದಕ್ಕೆ ಅಥವಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡತಕ್ಕದ್ದು, ಅಥವಾ ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು."

**5. 64ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 64ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಅಥವಾ ಜಾಹೀರಾತು ಫಲಕಗಳನ್ನು ನಿಲ್ಲಿಸಲು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**6. 129ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 129ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡವನ್ನು ಮತ್ತು ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**7. 141ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 141ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ "ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ತಾಲ್ಲೂಕು ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು" ಎಂಬ ಪದಗಳಿಗೆ "ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ತಿಳಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 157ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 157ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ "ಕಾರ್ಯದರ್ಶಿಯು" ಎಂಬ ಪದಕ್ಕೆ "ಕಾರ್ಯನಿರ್ವಾಹಕ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 168ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 168ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡವನ್ನು ಮತ್ತು ಅದರ ಅಡಿಯಲ್ಲಿಯ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**10. 180ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 180ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ "ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಜಿಲ್ಲಾ ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು" ಎಂಬ ಪದಗಳಿಗೆ "ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ತಿಳಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. 199ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 199ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

**12. 246ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 246ನೇ ಪ್ರಕರಣದಲ್ಲಿ, "ರಾಜ್ಯ ಲೆಕ್ಕಪತ್ರ ನಿಯಂತ್ರಕರು" ಎಂಬ ಪದಗಳು ಎಲ್ಲೆಲ್ಲಿ ಬರುವವೋ ಅಲ್ಲೆಲ್ಲ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ಇಲಾಖೆ" ಎಂಬ ಪದಗಳನ್ನು ಪ್ರತ್ಯಯಗಳೊಂದಿಗೆ, ಅಲ್ಪವಿರಾಮ ಚಿಹ್ನೆಯೊಂದಿಗೆ ಹಾಗೂ ವ್ಯಾಕರಣ ವ್ಯತ್ಯಾಸಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

**13. 296ಎ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 296ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಅಧಿಕಾರಿಯನ್ನು" ಎಂಬ ಪದಕ್ಕೆ ಮೊದಲು "ನಿವೃತ್ತ" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ಯಾವಾಗಲೂ ಹಾಗೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

**14. 308ಎಬಿ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 308ಎಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳಿಗೆ "ಚುನಾವಣಾಧಿಕಾರಿಯು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**15. 308ಎಡಿ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 308ಎಸಿ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"308ಎಡಿ. ಚುನಾವಣಾ ವೆಚ್ಚದ ಲೆಕ್ಕ ಮತ್ತು ಆ ವೆಚ್ಚದ ಗರಿಷ್ಠ ಮೊತ್ತ.–** (1) ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು ತಾನಾಗಿಯೇ ಆಗಲಿ ಅಥವಾ ತನ್ನ ಚುನಾವಣಾ ಏಜಂಟಿನಿಂದಾಗಲಿ, ಎಲ್ಲಾ ವೆಚ್ಚಗಳಿಗೆ, ತನ್ನನ್ನು ನಾಮನಿರ್ದೇಶನ ಮಾಡಿದ ದಿನಾಂಕದಿಂದ ಅದರ ಫಲಿತಾಂಶವು ಘೋಷಿತವಾದ ದಿನಾಂಕದ ನಡುವೆ, ಎರಡೂ ದಿನಾಂಕಗಳು ಸೇರಿದಂತೆ,

ಚುನಾವಣೆಯ ಸಂಬಂಧದಲ್ಲಿ ತಾನು ಅಥವಾ ತನ್ನ ಚುನಾವಣಾ ಏಜೆಂಟನು ವಹಿಸಿದ ಅಥವಾ ಪ್ರಾಧೀಕರಿಸಿದ ಎಲ್ಲ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಭ್ಯರ್ಥಿಯ ಚುನಾವಣೆಯ ಸಂಬಂಧದಲ್ಲಿ ಒಂದು ರಾಜಕೀಯ ಪಕ್ಷವು ಅಥವಾ ಯವುದೇ ಇತರ ಅಸೋಶಿಯೇಷನ್ ಅಥವಾ ನಿಕಾಯ ಅಥವಾ ವ್ಯಕ್ತಿಗಳು ಅಥವಾ ಯಾವೊಬ್ಬ ವ್ಯಕ್ತಿಯು (ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಪ್ರಾಧೀಕರಿಸಿದ ಯಾವುದೇ ವೆಚ್ಚವನ್ನು ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟನು (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಚುನಾವಣೆಗೆ ಸಂಬಂಧಿಸಿದಂತೆ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

**ವಿವರಣೆ 1:** ಈ ಉಪಪ್ರಕರಣದ ಉದ್ದೇಶಕ್ಕಾಗಿ "ರಾಜಕೀಯ ಪಕ್ಷ"ವು, ತತ್ಕಾಲದಲ್ಲಿ ಜಾರಿಯಲ್ಲಿರುವ 1968ರ ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶದಲ್ಲಿನ ಅರ್ಥವನ್ನೇ ಹೊಂದಿರತಕ್ಕದ್ದು.

**ವಿವರಣೆ 2:** ಸಂದೇಹಗಳ ನಿವಾರಣೆಗಾಗಿ, ಸರ್ಕಾರದ ಸೇವೆಯಲ್ಲಿರುವ ಅಥವಾ ಜಿಲ್ಲಾ ಪಂಚಾಯಿತಿ ಅಥವಾ ಸಂದರ್ಭಾನುಸಾರವಾಗಿ ತಾಲ್ಲೂಕು ಪಂಚಾಯಿತಿ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, (ಅಭ್ಯರ್ಥಿಯು ಧಾರಣ ಮಾಡಿದ ಹುದ್ದೆಯ ಕಾರಣದಿಂದಾಗಲಿ ಅಥವಾ ಇತರ ಯಾವುದೇ ಕಾರಣದಿಂದಾಗಲಿ) ಯಾವೊಬ್ಬ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯೊಡನೆ ಕಾರ್ಯನಿರ್ವಹಿಸುವ ಇತರ ಯಾವೊಬ್ಬ ವ್ಯಕ್ತಿಗಾಗಿ, ವ್ಯಕ್ತಿಗೆ, ಅಥವಾ ವ್ಯಕ್ತಿಯ ಸಂಬಂಧದಲ್ಲಿ ತನ್ನ ಅಧಿಕೃತ ಕರ್ತವ್ಯದ ನೆರವೇರಿಕೆಯಲ್ಲಿ ಅಥವಾ ನೆರವೇರಿಕೆ ಎಂದು ತಾತ್ಪರ್ಯವಾಗುವಲ್ಲಿ ಮಾಡಿದ ಯಾವುದೇ ವ್ಯವಸ್ಥೆ, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಯಾವುದೇ ಇತರ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿದ ಯಾವುದೇ ವೆಚ್ಚವನ್ನು, ಈ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ಅಭ್ಯರ್ಥಿಯು ಅಥವಾ ಚುನಾವಣಾ ಏಜೆಂಟನು, ಚುನಾವಣೆಯ ಸಂಬಂಧದಲ್ಲಿ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕಪತ್ರವು, ನಿಯಮಿಸಬಹುದಾದ ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ಒಟ್ಟು ವೆಚ್ಚವು ನಿಯಮಿಸಬಹುದಾದ ಅಂತಹ ಮೊತ್ತವನ್ನು ಮೀರತಕ್ಕದ್ದಲ್ಲ."

**16. 310ಎ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 310ಎ ಪ್ರಕರಣದ (2)ನೇ ಉಪಪ್ರಕರಣದ (v) ಖಂಡದಲ್ಲಿ "ಪ್ರತಿ ಜಿಲ್ಲಾ ಪಂಚಾಯತಿಯಿಂದ" ಎಂಬ ಪದಗಳಿಗೆ "ಸರ್ಕಾರದಿಂದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**17. ಅನುಸೂಚಿ–IVರ ತಿದ್ದುಪಡಿ.–** ಮೂಲ ಅಧಿನಿಯಮದ ಅನುಸೂಚಿ–IVರಲ್ಲಿ, (ಸಿ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**18. ಬಾಕಿಯಿರುವ ಪ್ರಕರಣಗಳ ವರ್ಗಾವಣೆ.–** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಅಧಿನಿಯಮ, 2017 ಜಾರಿಗೆ ಬಂದ ದಿನಾಂಕದಂದು ಜಿಲ್ಲಾ ಪಂಚಾಯತಿಯ ಚುನಾವಣೆ ವಿವಾದಗಳಿಗೆ ಸಂಬಂಧಿಸಿದಂತೆ, ಅಧಿಕಾರ ವ್ಯಾಪಿಯುಳ್ಳ ಜಿಲ್ಲಾ ನ್ಯಾಯಾಧೀಶರ ಮುಂದೆ ಬಾಕಿಯಿರುವ ಎಲ್ಲಾ ಪ್ರಕರಣಗಳನ್ನು ಅಧಿಕಾರವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಕೂಡಲೇ ವರ್ಗಾಯಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:-

(1) ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಚುನಾವಣಾ ವಿವಾದಗಳನ್ನು ನಿರ್ವಹಿಸಲು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿಯನ್ನು ವಹಿಸುವುದು.

(2) 13ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಉಪಬಂಧವನ್ನು ಬಿಟ್ಟುಬಿಡುವುದು.

(3) ಸರಕುಗಳು ಮತ್ತು ಸೇವಾ ತೆರಿಗೆಯು ಜಾರಿಯಾದ ಪರಿಣಾಮವಾಗಿ ಪಂಚಾಯತಿಯು ಜಾಹೀರಾತು ತೆರಿಗೆಯನ್ನು ವಿಧಿಸುವ ಕುರಿತಾದ ಉಪಬಂಧಗಳನ್ನು ಬಿಟ್ಟುಬಿಡುವುದು.

ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ: 15** | (1) 15ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 308ಎಡಿ ಪ್ರಕರಣದ (3)ನೇ ಉಪಪ್ರಕರಣವು ಚುನಾವಣಾ ವೆಚ್ಚಗಳ ಲೆಕ್ಕಪತ್ರವು ಒಳಗೊಳ್ಳಬೇಕಾದ ವಿವರಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(2) 15ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 308ಎಡಿ ಪ್ರಕರಣದ (4)ನೇ ಉಪಪ್ರಕರಣವು ಮೀರಲಾಗದಂಥ ಗರಿಷ್ಠ ಚುನಾವಣಾ ವೆಚ್ಚದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಹೆಚ್. ಕೆ. ಪಾಟೀಲ್**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

**XX XX XX**

**2. ಅರ್ಥ ವಿವರಣೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ,-

**XX XX XX**

(9ಎ) **"ಗೊತ್ತುಪಡಿಸಿದ ನ್ಯಾಯಾಲಯ"** ಎಂದರೆ, ಗ್ರಾಮ ಪಂಚಾಯತಿಗಳಿಗೆ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳನ್ನು ಅಧಿವಿಚಾರಣೆಯನ್ನು ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ಗೊತ್ತುಪಡಿಸಿದ, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಯಾವ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಗೆ ಬರುವವೋ ಆ ಜಿಲ್ಲಾ ಪಂಚಾಯತಿಗಳು ಅನುಕ್ರಮವಾಗಿ ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೋ ಆ ಜಿಲ್ಲಾ ಪಂಚಾಯತ್‌ಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಗಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ.

**XX XX XX**

**13. ಸದಸ್ಯರ ಸ್ಥಾನವು ಖಾಲಿಯಾಗುವುದು.**- (1) ಗ್ರಾಮ ಪಂಚಾಯತಿಯ ಸದಸ್ಯನು,-

(ಎ) 12ನೇ ಪ್ರಕರಣದಲ್ಲಿ ಹೇಳಿರುವ ಯಾವುವೇ ಅನರ್ಹತೆಗಳಿಗೊಳಗಾಗಿದ್ದರೆ ಅಥವಾ ಒಳಗಾದರೆ; ಅಥವಾ

(ಬಿ) 53ನೇ ಪ್ರಕರಣದ (4) ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮತ ಚಲಾಯಿಸಿದರೆ ಅಥವಾ ಚರ್ಚೆಯಲ್ಲಿ ಭಾಗವಹಿಸಿದರೆ; ಅಥವಾ

(ಸಿ) ಗ್ರಾಮ ಪಂಚಾಯತಿಯ ಅನುಮತಿ ಇಲ್ಲದೆ ಗ್ರಾಮ ಪಂಚಾಯತಿಯ ಮೂರಕ್ಕಿಂತ ಹೆಚ್ಚು ಅನುಕ್ರಮ ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ,-

-ಸಂದರ್ಭಾನುಸಾರ ಅವನ ಸ್ಥಾನವು ಖಾಲಿಯಾಗಿರುವುದಾಗಿ ಅಥವಾ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು:

**XX XX XX**

**48. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದುಹಾಕುವಿಕೆ.-** (1) ಗ್ರಾಮ ಪಂಚಾಯತಿಯ ಅಧ್ಯಕ್ಷನು, ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು ಮತ್ತು ಗ್ರಾಮ ಪಂಚಾಯತಿಯ ಉಪಾಧ್ಯಕ್ಷನು ತನ್ನ ಸಹಿ ಸಹಿತ ಅಧ್ಯಕ್ಷರಿಗೆ ಬರಹದಲ್ಲಿ ಬರೆದು ಮತ್ತು ಅಧ್ಯಕ್ಷನು ಇಲ್ಲದಿದ್ದಾಗ ತನ್ನ ಸಹಿ ಸಹಿತ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಬರಹದಲ್ಲಿ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು.

ಪರಂತು, ಗ್ರಾಮ ಪಂಚಾಯತಿಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನು, ತನ್ನ ಪದಕ್ಕೆ ಅಥವಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡತಕ್ಕದ್ದು ಅಥವಾ,-

(i) ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣಿಕರಿಸಿರುವುದರ ರುಜುವಾತಿನ ಆಧಾರದ ಮೇಲೆ; ಅಥವಾ

(ii) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ;

– ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು:

**XX XX XX**

**64. ಕಟ್ಟಡಗಳ ನಿರ್ಮಾಣದ ಬಗ್ಗೆ ನಿಯಂತ್ರಣ.-** (1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವನೇ ವ್ಯಕ್ತಿಯು, ಗ್ರಾಮ ಪಂಚಾಯತಿಯಿಂದ ಬರಹದ ಅನುಮತಿಯಿಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಬದಲಾಯಿಸತಕ್ಕದ್ದಲ್ಲ ಅಥವಾ ಜಾಹೀರಾತು ಫಲಕಗಳನ್ನು ನಿಲ್ಲಿಸಲು ಅಥವಾ ಆವರಣಗಳ ಒಳಗೆ ಖಾಲಿ ಇರುವ ಯಾವುದೇ ಜಾಗದಲ್ಲಿ ಅಥವಾ ಆ ಸ್ಥಳಕ್ಕೆ ಹೊಂದಿಕೊಂಡಿರುವ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಅದಕ್ಕೆ ಸೇರ್ಪಡೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ಕಟ್ಟಡವನ್ನು ಪುನರ್‌ನಿರ್ಮಿಸತಕ್ಕದ್ದಲ್ಲ. ಉಪವಿಧಿಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅನುಮತಿಯನ್ನು ನೀಡಬಹುದು.

**XX XX XX**

**129. ಸ್ಥಾನವು ಖಾಲಿಯಾಗುವುದು.-** (1) ತಾಲ್ಲೂಕು ಪಂಚಾಯತಿಯ ಯಾವನೇ ಸದಸ್ಯನು,-

**XX XX XX**

(ಡಿ) ಚುನಾಯಿತ ಸದಸ್ಯನಾಗಿರುವ ಅವನು, ಆರು ತಿಂಗಳು ಮೀರದ ಗೈರು ಹಾಜರಿಗಾಗಿ ಅವನಿಗೆ ತಾಲ್ಲೂಕು ಪಂಚಾಯತಿಯು ಅನುಮತಿ ನೀಡಿದ್ದ ಹೊರತು, ತಾಲ್ಲೂಕು ಪಂಚಾಯತಿಯ ಮೂರಕ್ಕೂ ಮೀರದ ಅನುಕ್ರಮ ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ

-ಅವನ ಸ್ಥಾನವು, ಸಂದರ್ಭಾನುಸಾರ ಖಾಲಿಯಾಗಿದೆಯೆಂದು ಅಥವಾ ಖಾಲಿಯಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, (ಡಿ) ಖಂಡದ ಅಡಿಯಲ್ಲಿ ಗೈರುಹಾಜರಾಗಲು ಅನುಮತಿಗಾಗಿ ತಾಲ್ಲೂಕು ಪಂಚಾಯಿತಿಗೆ ಸದಸ್ಯನು ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಆ ಅರ್ಜಿಯ ದಿನಾಂಕದಿಂದ ಒಂದು ತಿಂಗಳಿನ ಅವಧಿಯೊಳಗೆ, ತಾಲ್ಲೂಕು ಪಂಚಾಯತಿಯು ಆ ಅರ್ಜಿಯ ಬಗ್ಗೆ ಅದರ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ, ಕೋರಿಕೊಂಡ ಅನುಮತಿಯನ್ನು ತಾಲ್ಲೂಕು ಪಂಚಾಯತಿಯು ಮಂಜೂರ್ಮಾಡಿರುವುದಾಗಿ ಭಾವಿಸತಕ್ಕದ್ದು.

**XX XX XX**

**141. ತಾಲ್ಲೂಕು ಪಂಚಾಯತಿಯ ಸಭೆಗಳು.**- (1) **XX XX XX**

(2) (ಎ) ತಾಲ್ಲೂಕು ಪಂಚಾಯತಿಯ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರಚನೆಯ ತರುವಾಯ 1[ಅಥವಾ ಸಂದರ್ಭಾನುಸಾರ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ತರುವಾಯದ ಸಭೆಯ ದಿನಾಂಕವನ್ನು]1 ಅಸಿಸ್ಟೆಂಟ್ ಕಮಿಷನರ್ ಅವರು ಗೊತ್ತುಪಡಿಸತಕ್ಕದ್ದು, ಅವರು ಅಂಥ ಸಭೆಯ ಆಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ತಾಲ್ಲೂಕು ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು, ಪರಂತು, ಅಧ್ಯಕ್ಷನು ಸಾಕಷ್ಟು ಕಾರಣಗಳಿಗಾಗಿ ಆ ಸಭೆಯ ದಿವಸವನ್ನು ತರುವಾಯದ ದಿನಾಂಕಕ್ಕೆ ಬದಲಾಯಿಸಬಹುದು. ಅಧ್ಯಕ್ಷನು, ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲ ವಿಶೇಷ ಸಬೆಯನ್ನು ಕರೆಯಬಹುದು ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬರಹದಲ್ಲಿನ ಕೋರಿಕೆಯ ಮೇರೆಗೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅದನ್ನು ಕರೆಯತಕ್ಕದ್ದು. ಅಂಥ ಕೋರಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ಆ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆಯೋ ಆ ವಿಷಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ, ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳಿಗೆ ಮೀರದೆ ಒಂದು ದಿನ ವಿಶೇಷ ಸಭೆಯನ್ನು

ಕರೆಯಬಹುದು ಮತ್ತು ಸದಸ್ಯರಿಗೆ ನೋಟೀಸನ್ನು ಕೊಡಲು ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸಬಹುದು.

**XX XX XX**

**157. ದಾಖಲೆ ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರಲು ಕಾರ್ಯನಿರ್ವಾಹಕ ಅಧಿಕಾರಿಯ ಹಕ್ಕು.-**

**XX XX XX**

(4) ಈ ಪ್ರಕರಣದ ಅಡಿಯಲ್ಲಿ ಕಾರ್ಯದರ್ಶಿಯು ಮಾಡಿದ ಆದೇಶದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದು.

**XX XX XX**

**168. ಸ್ಥಾನವು ಖಾಲಿಯಾಗಿರುವುದು.-** (1) ಜಿಲ್ಲಾ ಪಂಚಾಯತಿಯ ಯಾವನೇ ಸದಸ್ಯನು,-

**XX XX XX**

(ಡಿ) ಚುನಾಯಿತ ಸದಸ್ಯನಾಗಿರುವ ಅವನು ಆರು ತಿಂಗಳು ಮೀರದ ಗೈರುಹಾಜರಿಗಾಗಿ ಅವನಿಗೆ ಜಿಲ್ಲಾ ಪಂಚಾಯತಿಯು ಅನುಮತಿಯನ್ನು ಕೊಟ್ಟಿದ್ದ ಹೊರತು, ಜಿಲ್ಲಾ ಪಂಚಾಯತಿಯ ಮೂರಕ್ಕೂ ಮೀರಿದ ಅನುಕ್ರಮ ಸಾಮಾನ್ಯ ಸಭೆಗಳಿಗೆ ಗೈರುಹಾಜರಾದರೆ

-ಅವನ ಸ್ಥಾನವು ಸಂದರ್ಭಾನುಸಾರ ಖಾಲಿಯಾಗಿದೆಯೆಂದು ಅಥವಾ ಖಾಲಿಯಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, (ಡಿ) ಖಂಡದ ಅಡಿಯಲ್ಲಿ ಗೈರು ಹಾಜರಾಗಲು ಅನುಮತಿಗಾಗಿ ಜಿಲ್ಲಾ ಪಂಚಾಯತಿಗೆ ಸದಸ್ಯನು ಅರ್ಜಿಯನ್ನು ಸಲ್ಲಿಸಿರುವಲ್ಲಿ ಮತ್ತು ಆ ಅರ್ಜಿಯ ದಿನಾಂಕದಿಂದ ಒಂದು ತಿಂಗಳಿನ ಅವಧಿಯೊಳಗೆ ಜಿಲ್ಲಾ ಪಂಚಾಯತಿಯು ಆ ಅರ್ಜಿಯ ಬಗ್ಗೆ ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ ಕೋರಿಕೊಂಡ ಅನುಮತಿಯನ್ನು ಜಿಲ್ಲಾ ಪಂಚಾಯತಿಯು ಮಂಜೂರ್‍ಮಾಡಿದೆಯಾಗಿ ಭಾವಿಸತಕ್ಕದ್ದು.

**XX XX XX**

**180. ಜಿಲ್ಲಾ ಪಂಚಾಯತಿಯ ಸಭೆಗಳು.-** (1) **XX XX XX**

(2) (ಎ) ಜಿಲ್ಲಾ ಪಂಚಾಯತಿಯ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರಚನೆಯ ತರುವಾಯ ಅಥವಾ ಸಂದರ್ಭಾನುಸಾರ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಚುನಾವಣೆಯ ಉದ್ದೇಶಕ್ಕಾಗಿ ನಡೆಸಲಾಗುವ ತರುವಾಯದ ಸಭೆಯ ದಿನಾಂಕವನ್ನು ಕಮೀಶನರ್ ಅವರು ಗೊತ್ತುಪಡಿಸತಕ್ಕದ್ದು.

ಅವರು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಜಿಲ್ಲಾ ಪಂಚಾಯತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು. ಪರಂತು ಅಧ್ಯಕ್ಷನು ಸಾಕಷ್ಟು ಕಾರಣಗಳಿಗಾಗಿ ಆ ಸಭೆಯ ದಿವಸವನ್ನು ತರುವಾಯದ ದಿನಾಂಕಕ್ಕೆ ಬದಲಾಯಿಸಬಹುದು. ಅಧ್ಯಕ್ಷನು ಸೂಕ್ತವೆಂದು ತಾನು ಯೋಚಿಸಿದಾಗಲೆಲ್ಲಾ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬರಹದಲ್ಲಿನ ಕೋರಿಕೆಯ ಮೇರೆಗೆ ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಅದನ್ನು ಕರೆಯತಕ್ಕದ್ದು. ಅಂಥ ಕೋರಿಕೆಯಲ್ಲಿ ಯಾವ ಉದ್ದೇಶಕ್ಕಾಗಿ ಆ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆಯೋ ಆ ವಿಷಯವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧ್ಯಕ್ಷನು ವಿಶೇಷ ಸಭೆಯನ್ನು ಕರೆಯಲು ತಪ್ಪಿದರೆ ಉಪಾಧ್ಯಕ್ಷನು ಅಥವಾ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಹದಿನೈದು ದಿವಸಗಳಿಗೆ ಮೀರದ ಒಂದು ದಿನ ವಿಶೇಷ ಸಭೆಯನ್ನು ಕರೆಯಬಹುದು ಮತ್ತು ಸದಸ್ಯರಿಗೆ ನೋಟೀಸನ್ನು ಕೊಡಲು ಮತ್ತು ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಗತ್ಯಪಡಿಸಬಹುದು.

**XX XX XX**

**199. ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದು ಇತ್ಯಾದಿ.-**

**XX XX XX**

(3) ಗ್ರಾಮ ಪಂಚಾಯತಿಯು, IVನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ದರವನ್ನು ಮೀರದಂತೆ ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿನಾಯಿತಿಗೊಳಪಟ್ಟು, ಗ್ರಾಮ ಪಂಚಾಯತಿಯು ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ದರಗಳಲ್ಲಿ ಕೆಳಕಂಡ ಎಲ್ಲ ಅಥವಾ ಯಾವುವೇ ತೆರಿಗೆಗಳು ಅಥವಾ ಫೀಜುಗಳನ್ನು ವಿಧಿಸಬಹುದು, ಎಂದರೆ:-

(ಎ) ಚಲನಚಿತ್ರ ಪ್ರದರ್ಶನಗಳನ್ನು ಹೊರತುಪಡಿಸಿ, ಯಾವುವೇ ಇತರ ಮನರಂಜನೆಗಳ ಮೇಲೆ ತೆರಿಗೆ;

(ಬಿ) ಮೋಟಾರು ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳ ಮೇಲೆ ತೆರಿಗೆ;

(ಸಿ) ಜಾಹೀರಾತುಗಳು ಮತ್ತು ಜಾಹೀರಾತು ಪ್ರಕಟಣಾ ಫಲಕಗಳು;

**XX XX XX**

**246. ಲೆಕ್ಕಪತ್ರಗಳ ಪರಿಶೋಧನೆ.**- (1) ಪ್ರತಿಯೊಂದು ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ಪ್ರತಿವರ್ಷ, ರಾಜ್ಯ ಲೆಕ್ಕಪತ್ರ ನಿಯಂತ್ರಕರು ಅಧಿಕಾರ ನೀಡಿರುವಂಥ ಅಧಿಕಾರಿಯು (ಇದರಲ್ಲಿ ಇನ್ನು ಮುಂದೆ ಲೆಕ್ಕಪರಿಶೋಧಕ ಎಂದು ಕರೆಯಲಾಗಿದೆ) ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಸೇವಾ ಷರತ್ತುಗಳು) ಅಧಿನಿಯಮ, 1971ರ (1971ರ ಕೇಂದ್ರ ಅಧಿನಿಯಮ 56) ಉಪಬಂಧಗಳಿಗನುಸಾರವಾಗಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರವರು ಒದಗಿಸತಕ್ಕದ್ದು ಮತ್ತು ಗ್ರಾಮ ಪಂಚಾಯತಿಗಳ ಲೆಕ್ಕಗಳ ಪರೀಕ್ಷಾರ್ಥ ತಪಾಸಣೆ ಮಾಡತಕ್ಕದ್ದು, ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

**XX XX XX**

(11) ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರು ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಮಾಡಿದ ಸಂಕ್ಷಿಪ್ತ ಅಭಿಪ್ರಾಯೋಕ್ತಿಗಳನ್ನು ಮತ್ತು ಗ್ರಾಮ ಪಂಚಾಯತಿಗಳು ಸರಿಪಡಿಸಿರುವುದನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(12) ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಸಂಬಂಧದಲ್ಲಿ ಕ್ರೋಢಿಕೃತ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅಂಥ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

**XX XX XX**

**296ಎ. ಕುಂದು ಕೊರತೆ ನಿವಾರಣಾ ಪ್ರಾಧಿಕಾರ.**- (1) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ವಿಶೇಷ ಡೆಪ್ಯೂಟಿ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಯನ್ನು ಒಳಗೊಂಡ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯನ್ನಾಗಿ ನೇಮಿಸತಕ್ಕದ್ದು.

**XX XX XX**

**308ಎಬಿ. ನಾಮ ಪತ್ರಗಳನ್ನು ಸಲ್ಲಿಸುವುದು ಮೊದಲಾದವುಗಳಿಗಾಗಿ ದಿನಾಂಕಗಳ ಅಧಿಸೂಚನೆ.** (1) ಸದಸ್ಯನನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರವನ್ನು ಕೋರುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ರಾಜ್ಯ ಚುನಾವಣಾ ಆಯೋಗವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ,-

**XX XX XX**

**310ಎ. ರಾಜ್ಯ ಪಂಚಾಯತಿ ಪರಿಷತ್ತು.**- (1) **XX XX XX**

(2) ರಾಜ್ಯ ಪಂಚಾಯತಿ ಪರಿಷತ್ತು,-

(i) ಮುಖ್ಯ ಮಂತ್ರಿಯವರನ್ನು ಅಧ್ಯಕ್ಷರನ್ನಾಗಿ;

(ii) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಉಪಾಧ್ಯಕ್ಷರನ್ನಾಗಿ;

(iii) ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಇತರ ಐವರು ಸಚಿವರುಗಳನ್ನು ಸದಸ್ಯರುಗಳನ್ನಾಗಿ; ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರನ್ನು ಸದಸ್ಯರನ್ನಾಗಿ;

(iv) ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರನ್ನು ಸದಸ್ಯರನ್ನಾಗಿ;

(v) ಪ್ರತಿ ಜಿಲ್ಲಾ ಪಂಚಾಯತಿಯಿಂದ ನಾಮನಿರ್ದೇಶಿಸಲ್ಪಟ್ಟ ನಾಲ್ಕು ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರು ಹಾಗೂ ಒಂದು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರುಗಳನ್ನು ಸದಸ್ಯರುಗಳನ್ನಾಗಿ;

**XX XX XX**

**ಅನುಸೂಚಿ – IV**

**(199ನೇ ಪ್ರಕರಣವನ್ನು ನೋಡಿ)**

**ಸ್ವತ್ತಿನ ಮೇಲೆ ತೆರಿಗೆ : ಕಟ್ಟಡದ ಮೇಲೆ ತೆರಿಗೆ**

| | | |
|---|---|---|
| ಸಿ | ಜಾಹಿರಾತುಗಳು ಮತ್ತು ಹೋರ್ಡಿಂಗ್‌ಗಳ ಮೇಲೆ ತೆರಿಗೆ:<br>ಪ್ರತಿ ಚ.ಮೀ.ಗೆ ಅಥವಾ ಅದರ ಭಾಗಕ್ಕೆ | ಸ್ವತ್ತಿನ ಬಂಡವಾಳ ಮೌಲ್ಯದ ಮೇಲೆ ಶೇಕಡಾ 0.01ಕ್ಕಿಂತ ಕಡಿಮೆಯಲ್ಲದ ಆದರೆ ಶೇಕಡಾ 0.02ಕ್ಕಿಂತ ಹೆಚ್ಚಲ್ಲದ.<br>ತಿಂಗಳೊಂದಕ್ಕೆ ಐದು ರೂಪಾಯಿಗಳು |

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , –ಪ್ರತಿಗಳು 1000, 19ನೇ ನೂನ್ 2017

Serial No: 16

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**FOURTEENTH SESSION**

# THE KARNATAKA GRAM SWARAJ AND PANCHAYAT RAJ (AMENDMENT) BILL, 2017

**(L.A. Bill No. 34 of 2017)**

A Bill further to amend the Karnataka Gram Swaraj and Panchayat Raj Act, 1993.

Whereas, it is expedient further to amend the Karnataka Gram Swaraj and Panchayat Raj Act, 1993 (Karnataka Act 14 of 1993) for the purposes hereinafter appearing;

Be it enacted by the Karnataka State Legislature in the sixty-eighth year of the Republic of India, as follows:-

**1. Short title and commencement.-** (1) This Act may be called the Karnataka Gram Swaraj and Panchayat Raj (Amendment) Act, 2017.

(2) It shall come into force at once.

**2. Amendment of section 2.-** In section 2 of the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the principal Act), for clause (9A), the following shall be substituted, namely:-

"(9A) "Designated Court" means the jurisdictional Court of Senior Civil Judge designated for the trial of election disputes related to Gram Panchayats, Taluk Panchayats and Zilla Panchayats, in whose territorial jurisdiction respectively, the panchayat area or a major portion of the panchayat area is situated."

**3. Amendment of section 13.-** In section 13 of the principal Act, in sub-section (1), clause (c), shall be omitted.

**4. Amendment of section 48.-** In sub-section(1) of section 48 of the principal Act, for the first proviso the following shall be substituted, namely:-

Provided that Adhyaksha or Upadhyaksha of a Gram Panchayat shall,-

(i) on the grounds of proven physical or mental incapacity certified by a competent authority approved by the State Election Commission; or;

(ii) on the grounds of securing employment in central Government or State Government or public undertakings;

-resign his office or membership, or be liable for removal.

**5. Amendment of section 64.-** In section 64 of the principal Act, in sub-section (1), the words "or errect advertisement hoarding" shall be omitted.

**6. Amendment of section 129.-** In section 129 of the principal Act, in sub-section (1), clause (d) and the proviso shall be omitted.

**7. Amendment of section 141.-** In section 141 of the principal Act, in sub-section (2), in clause (a), for the words "the date of subsequent ordinary meeting shall fixed at the previous meeting", the words "the date of each subsequent ordinary meeting shall be decided by the Adhyaksha and he shall inform the same at the immediately preceding meeting" shall be substituted.

**8. Amendment of section 157.-** In section 157 of the principal Act, in sub-section (4), for the word "Secretary", the words "the Executive Officer" shall be substituted.

**9. Amendment of section 168.-** In section 168 of the principal Act, in sub-section (1), clause (d) and the proviso there under shall be omitted.

**10. Amendment of section 180**.- In section 180 of the Principal Act, in sub-section (2), in clause (a), for the words "the date of subsequent ordinary meeting shall fixed at the previous meeting", the words "the date of

each subsequent ordinary meeting shall be decided by the Adhyaksha and he shall inform the same at the immediately preceding meeting" shall be substituted.

**11. Amendment of section 199.-** In section 199 of the principal Act, in sub-section (3), clause (c) shall be omitted.

**12. Amendment of section 246.-** In section 246 of the principal Act, for the words "Controller of State Accounts" wherever it appears, the words "Director General, Karnataka State Accounts And Audit Department" shall be substituted.

**13. Amendment of section 296A.-** In section 296A of the principal Act, in sub-section (1), for the words, "district judge or an", the words "district judge or a retired" shall be and shall always be deemed to have been substituted.

**14. Amendment of section 308-AB.-** In section 308AB of the principal Act, in sub-section (1), for the words "State Election Commission", the words "Returning Officer" shall be substituted.

**15. Insertion of section 308AD.-** After section 308AC of the principal Act, the following shall be inserted, namely:-

**"308-AD. Account of election expenses and maximum thereof.**- (1) Every candidate at an election to Zilla Panchayat or Taluk Panchayat under this Act shall either by himself or by his election agent, keep a separate and correct account of all expenditure in connection with the election, incurred or authorized by him or by his election agent between the date of which he has been nominated and the date of declaration of the result thereof, both dates inclusive.

(2) Any expenditure incurred or authorized in connection with the election of the candidate referred to in sub-section (1) by a political party or by any other association or body or persons or by any individual (other than the candidate or his election agent) shall not be deemed to be the

expenditure in connection with the election incurred or authorized by the candidate or by his election agent for the purpose of sub-section (1).

**Explanation 1**: For the purposes of this sub-section, 'Political Party' shall have the same meaning as in the Election Symbols (Reservation and Allotment) Order, 1968 for the time being in force.

**Explanation 2:** For the removal of doubts, it is hereby declared that any expenditure incurred in respect of any arrangement made facilities provided or any other act or thing done by any person in the service of the Government or the service of the Zilla Panchayat or Taluk Panchayat as the case may be, the discharge or purported discharge of his official duty for, or to, or in relation to any candidate or his election agent or any other person acting with the consent of the candidate or his election agent (whether by reason of the office held by the candidate or for any other reason) shall not be deemed to be expenditure in connection with the election incurred or authorized by a candidate or by his election agent for the purpose of this section.

(3) The account shall contain such particulars as may be prescribed.

(4) The total of the said expenditure shall not exceed such amount as may be prescribed."

**16. Amendment of section 310A.-** In section 310A of the principal Act, in sub-section (2), in clause (v), for the words "each Zilla Panchayat", the words "the Government" shall be substituted.

**17. Amendment of schedule-IV.-** In schedule-IV to the principal Act, clause (c) and entries relating thereto shall be omitted.

**18. Transfer of Pending Cases.-** All cases pending pertaining to election disputes of the Zilla Panchayat before the jurisdictional District Judge on the date of commencement of the Karnataka Gram Swaraj and Panchayat Raj (Amendment) Act, 2017 shall immediately be transferred to the jurisdictional court of Senior Civil Judge.

**STATEMENT OF OBJECTS AND REASONS**

It is considered necessary to amend the Karnataka Grama Swaraj and Panchayat Raj Act, 1993 (Karnataka Act 14 of 1993) to,-

(1) entrust the jurisdiction of handling of election disputes of Gram Panchayat, Taluk Panchayat and Zilla Panchayat to the court of Senior Civil Judge.

(2) omit the provision of clause (c) of sub-section (1) of section 13.

(3) omit the provisions regarding levy of advertisement tax by panchayat consequent on the enforcement of Goods and Services Tax.

Certain other consequential amendments are also made.

Hence the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

**Clause 15:**

(1) Sub-section (3) of section 308AD sought to be inserted by clause 15 empowers the State Government to make rules regarding particulars to be contained in the account of election expenses.

(2) Sub-section (4) of section 308AD sought to be inserted by clause 15 empowers the State Government to make rules regarding the maximum amount of election expenditure which shall not be exceeded.

The proposed delegation of Legislative Power is normal in character.

**H.K.PATIL**
Minister for Rural Development
and Panchayat Raj

**S. Murthy**
Secretary (I/c)
Karnataka Legislative Assembly

## ANNEXURE

**Extract from the Karnataka Gram Swaraj and Panchayat Raj Act, 1993 (Karnataka Act 14 of 1993)**

**xx xx xx**

**2. Definitions.-** In this Act, unless the context otherwise requires,-

**xx xx xx**

(9A) "Designated Court" means the jurisdictional Court of Senior Civil Judge designated for the trial of election disputes related to Gram Panchayats and Taluk Panchayats and the court of the jurisdictional District judge for the trial of election disputes relating to Zilla Panchayats, in whose territorial jurisdiction respectively, the panchayat area or a major portion of the panchayat area is situated.

**xx xx xx**

**13. Vacation of seat by members.-** (1) If a member of a Grama Panchayat,-

(a) is or becomes subject to any of the disqualifications mentioned in section 12 ; or

(b) votes or takes part in discussion in contravention of the provisions of sub-section (4) of section 53; or

(c) absents himself for more than three consecutive ordinary meetings of the Grama Panchayat without the leave of the Grama Panchayat

his seat shall be deemed to be or to have become, as the case may be vacant:

**xx xx xx**

**48. Resignation or removal of Adhyaksha and Upadhyaksha.-** (1) The Adhyaksha of the Grama Panchayat may resign his office by writing under his hand addressed to the Assistant Commissioner and the Upadhyaksha of the Grama Panchayat may resign his office by writing under his hand addressed to the Adhyaksha and in absence of the Adhyaksha to the Assistant Commissioner.

Provided that Adhyaksha or Upadhyaksha of a Gram Panchayat shall resign his office or membership, or liable for removal,-

(i) on the grounds of proven physical or mental incapacity certified by a competent authority approved by the State Election Commission; or

(ii) on the grounds of securing employment in central Government or State Government or public undertakings.

**xx xx xx**

**64. Regulation of the erection of buildings**.- (1) Subject to such rules as may be prescribed, no person shall erect any building or alter or add to any existing building or errect advertisement hoarding or set up mobile towers atop or alongside or in any vacant space within the premises or reconstruct any building without the written permission of the Grama Panchayat. The permission may be granted on payment of such fees as may be specified by bye-laws.

**xx** **xx** **xx**

**129. Vacancy of seat.-** (1) If any member of a Taluk Panchayat,-

**xx** **xx** **xx**

(d) being an elected member absents himself, for more than three consecutive ordinary meetings of the Taluk Panchayat unless leave so to absent himself, which shall not exceed six months, had been granted by the Taluk Panchayat.

his seat shall be deemed to be or to have become, as the case may be, vacant.

Provided that where an application is made by a member to the Taluk Panchayat for leave to absent himself under clause (d) and the Taluk Panchayat fails to inform the applicant of its decision on the application within a period of one month from the date of the application the leave applied for shall be deemed to have been granted by the Taluk Panchayat.

**xx** **xx** **xx**

**141. Meetings of Taluk Panchayat.-**

**xx** **xx** **xx**

(2) (a) The date of the first meeting of the Taluk Panchayat after the first Constitution or reconstitution, or the date of subsequent meeting for the purpose of election of Adhysksha or Upadhyksha, as the case may be shall be fixed by the Assistant Commissioner who shall preside at such meeting and date of each subsequent ordinary meeting shall be fixed at the previous meeting of the Taluk Panchayat, provided that the Adhyaksha may for sufficient reasons, alter the day of the meeting to a subsequent date. The Adhyaksha may, whenever he thinks fit and shall, upon the written request of not less than one-third of the total number of members and on a date within fifteen days from the receipt of such request, call a special meeting. Such request shall specify the object for which the meeting is proposed to be called. If the Adhyaksha fails to call a special meeting, the Upadhyaksha or one-third of the total number of members may call the special meeting for a day not more than fifteen days after presentation of such request and require the Executive Officer to give notice to the members and to take such action as may be necessary to convene the meeting.

**XX** **XX** **XX**

**157. Executive Officer's right to requisition records. etc.-**

**XX** **XX** **XX**

(4) An appeal shall lie from an order of the Executive Officer under this section to the Chief Executive Officer.

**XX** **XX** **XX**

**168. Vacancy of Seats.-** (1) If any member of a Zilla Panchayat,-

**XX** **XX** **XX**

(d) being an elected member, absents himself, for more than three consecutive ordinary meetings of the Zilla Panchayat unless leave so to absents himself, which shall not exceed six months, had been granted by the Zilla Panchayat his seat shall be deemed to be or to have become, as the case may be, vacant:

Provided that where an application is made by a member to the Zilla Panchayat for leave to absents himself under clause (d) and the Zilla Panchayat fails to inform the applicant of its decision on the application within a period of one month from the date of the application the leave applied for shall be deemed to have been granted by the Zilla Panchayat.

**XX** **XX** **XX**

**180. Meetings of Zilla Panchayat.-**

**XX** **XX** **XX**

(2) (a) The date of the first meeting of the Zilla Panchayat after the first constitution or reconstitution or the date of subsequent meeting for the purpose of election of Adhyaksha or Upadhyaksha as the case may be shall be fixed by the Commissioner who shall preside at such meeting and date of each subsequent ordinary meeting shall be fixed at the previous meeting of the Zilla Panchayat, provided that the Adhyaksha of Zilla Panchayat may for sufficient reasons, alter the date of the meeting to a subsequent date. The Adhyaksha may, whenever he thinks fit and shall, upon the written request of not less than one-third of the total number of members and on a date within fifteen days from the receipt of such request, call a special meeting. Such request shall specify the object for which the meeting is proposed to be called. If the Adhyaksha fails to call a special meeting, the Upadhyaksha or one-third of the total number of members of the Zilla Panchayat may call the special meeting for a day not more than fifteen days after presentation of such request and require the Chief Executive Officer to give notice to the members and to take such action as may be necessary to convene the meeting.

**XX XX XX**

**199. Levy of taxes, rates, etc., by Grama Panchayats.-**

**XX XX XX**

(3) A Grama Panchayat may also levy all or any of the following taxes and fee at such rates as the Grama panchayat may by bye-laws determine but not exceeding the maximum specified in Schedule IV and in such manner and subject to such exemptions as may be prescribed, namely:-

(a) tax on entertainment other than cinematograph shows;

(b) tax on vehicles, other than motor vehicles;

(c) tax on advertisement and hoardings;

**XX XX XX**

**246. Audit of accounts.-** (1) The accounts of every Grama Panchayat shall be audited each year by such officer as may be authorised by the Controller of State Accounts (hereinafter referred to as the auditor) The Comptroller and Auditor General shall provide technical guidance and supervision for audit of accounts under this section in accordance with the provisions of Comptroller and Auditor General's (Duties, Powers and Conditions of Service) Act, 1971 (Central Act 56 of 1971) and also undertake test checks of the accounts of the Grama Panchayaths.

**XX XX XX**

(11) The Controller of State Accounts Department shall submit a summary of observations made in the audit report and rectifications made by the Grama Panchayats to the Government.

(12) The Controller of State Accounts Department shall submit to the Government a consolidated Annual Report in respect of all the Grama Panchayats of the State and the State Government shall lay such report before both the houses of the State Legislature.

**XX XX XX**

**296A. Grievance Redressal Authority.–** (1) The State Government may, by notification in the official gazette, constitute for every District a Grievance Redressal Authority consisting of a retired district judge or an officer not below the rank of special deputy commissioner.

**XX XX XX**

**308AB. Notification of dates for nominations etc. –** (1) As soon as the notification of election to elect a member is issued, the state election commission shall, by notification in the Official Gazette, notify, –

**XX XX XX**

**310A. State Panchayat Council.-**

**XX XX XX**

(2) The State Panchayat Council shall consist of,-

(i) the Chief Minister as Chairman,
(ii) the Minister for rural Development and Panchayat Raj as ViceChairman,
(iii) five other ministers nominated by the Government as members,
(iv) Adhyakshas of all the Zilla panchayats as members;
(v) the Adhyakshas of four Gram Panchayats, one from each revenue divisionand one Taluk Panchayath nominated by each Zilla Panchayath as members and;

**XX XX XX**

**SCHEDULE-IV**
**(See Section 199)**

**Tax on Property : Tax on buildings**

| | |
|---|---|
| C. Tax on advertisement and hoardings: | Not less than 0.01% but not more than 0.02% on Capital Value of the Property |
| For every square meter or part thereof. | Five rupees per month. |

**XX XX XX**

Government Press, Vikasa Soudha Unit, Bengaluru 19th June, 2017 P7, W.D., Copies 1000